‘ಉಪದೇಶ ಹೇಳೋಕೇನು ದುಡ್ಡು ಕೊಡ್ಬೇಕಾ? ನನ್ನ ಕಷ್ಟ ನಂಗೆ...’ ಎಂದು ಕುಂಯ್ಗುಟ್ಟುವವನನ್ನು ಹೇಗೆ ತಿದ್ದುವುದು? ಕ್ರಮೇಣ ಸರಿಯಾಗ್ತಾನೆ. ಪರಿಸ್ಥಿತಿಗೆ ಹೊಂದ್ಕೋತಾನೆ. ಒಪ್ಪಿಕೋತಾನೆ ಎಂದು ಗೆಳೆಯರು ಅವನ ಉಸಾಬರಿಗೆ ಹೋಗುವುದನ್ನು ಕೈ ಬಿಟ್ಟಿದ್ದರು. ಕೊರಗು ಹಚ್ಚಿಕೊಂಡೇ ಕಾಲ ಕಳೆಯುವುದು ವಿಶ್ವನಿಗೆ ಅಭ್ಯಾಸವಾಗಿಬಿಟ್ಟಿತ್ತು ಅನ್ನುವ ಹಾಗೆ ಮೊದಲೇ ಪೆಚ್ಚುಗಟ್ಟಿದ್ದ ವಿಶ್ವನ ಮುಖದ ಮೇಲೆ ಮತ್ತಷ್ಟು ಮಂಕು ಕವಿದಿತ್ತು.

***


ಹಾಗೆ ನೋಡಿದರೆ ಕಾಲು ಮುರಿದುಕೊಂಡು ಆಸ್ಪತ್ರೆ ಪಾಲಾದವರ ಸಂಸಾರದಲ್ಲಿ ಹೆಚ್ಚು ಚಡಪಡಿಕೆ, ಉದ್ವಿಗ್ನತೆ, ಭವಿಷ್ಯದ ಕುರಿತಾದ ಚಿಂತೆ ಇರಬೇಕಿತ್ತು. ಆದರೆ ಬಂದಿದ್ದನ್ನು ಒಪ್ಪಿಕೊಂಡು ದೇವರ ಮೇಲೆ ಭಾರ ಹಾಕಿ ನಿಶ್ಚಿಂತರಾಗಿದ್ದಾರೆ ಅವರು. ದೇವರು ನಡೆಸಿದಂತೆ ಆಗುತ್ತದೆ ಎಂದು ನಂಬಿಕೊಂಡಿದ್ದಾರೆ. ಆ ನಂಬಿಕೆಯಲ್ಲಿ ನೆಮ್ಮದಿ ಕಂಡುಕೊಂಡಿದ್ದಾರೆ. ಹಾಗೇ ಇರಬಹುದಿತ್ತು ವಿಶ್ವ. ಆದರೆ ಅವನ ತಲೆ ಕೆಲಸ ಮಾಡುವ ಕ್ರಮ ತದ್ವಿರುದ್ಧ. ಯಾರು ಸರಿ? ಆಧರಿಸಿ ನಡೆಯಲು ನಂಬಿಕೆಯ ಊರುಗೋಲು ಅವನ ಕೈಲಿಲ್ಲ. ತಡವರಿಸುವ ಹೆಜ್ಜೆ ಇಡುವ ವಿಶ್ವನಿಗಿಂತಾ ಆಧರಿಸಲು ಊರುಗೋಲು ಹೊಂದಿರುವ ಅವರು ಬದುಕನ್ನು ಬಂದ ಹಾಗೆ ಎದುರಿಸುತ್ತಾ ನೆಮ್ಮದಿಯಾಗಿರಬಲ್ಲರಲ್ಲವೇ? ಅಂದರೆ ತನ್ನ ಮನೋರಮೆಗಿಂತಾ ಅಪ್ಪನೇ ಹೆಚ್ಚು ಸರಿ ಎನ್ನುವ ನಿಲುವಿಗೆ ಬಂದು ತಲುಪಿದ್ದ ವಿಶ್ವ. ಸತ್ವಪರೀಕ್ಷೆಯ ಕಾಲ ಬಂದಾಗಲಷ್ಟೇ ಆಸರೆಯ ಅವಶ್ಯಕತೆ ಕಂಡು ಬರುವುದಲ್ಲವೇ?

ಸಣ್ಣ ವಿಷಯಕ್ಕೇ ಬರೋಣ. ಅಪ್ಪ ಹೇಳಿದಂತೆ ಹೋಮ ಹವನ ಮಾಡಿಸಿ ಗೃಹಪ್ರವೇಶ ಮಾಡಿದ್ದರೆ ಮನಸ್ಸಿನಲ್ಲೊಂದು ಶಾಂತಿ, ಸಮಾಧಾನ ಇರುತ್ತಿತ್ತು. ಕೊನೇಪಕ್ಷ ಯಾವ ಕಷ್ಟ ಬಂದರೂ ಅದು ಹಾಗಾಗಿದ್ದಕ್ಕೇ ಇದು ಹೀಗಾಗಿದ್ದು ಎಂದು ತಲೆಕೆಡಿಸಿಕೊಳ್ಳುವ ಪ್ರಮೇಯ ಬರುತ್ತಿರಲಿಲ್ಲ. ಕೆಲವು ವಿಷಯಗಳಲ್ಲಿ ಮನೋರಮಾ ಯಾಕೆ ಜಿಗುಟಾಗಿ ವರ್ತಿಸುತ್ತಾಳೆ ಮತ್ತು ಆ ಕ್ಷಣದಲ್ಲಿ ಅವಳು ಹೇಳುವುದು ಸರಿ ಎಂದು ಒಪ್ಪಿಕೊಳ್ಳುವ ದೌರ್ಬಲ್ಯ ತನಗೇಕೆ ಬರುತ್ತದೆ ಎಂದು ಮನಸ್ಸಲ್ಲೇ ತಿರುವಿ ಹಾಕುತ್ತಿದ್ದ ರಾಘವ ಒಂದು ಭಾನುವಾರದ ರಜಾ ದಿನ ತನ್ನ ಅಂತರಂಗವನ್ನು ಮನೋರಮನ ಎದುರು ತಾನು ಕಂಡ ಎರಡೂ ಉದಾಹರಣೆಗಳ ಸಮೇತ ತೆರೆದಿಟ್ಟ.

‘ನೀನು ಏನೇ ಹೇಳು ಮನೂ, ಯಾವುದೋ ಕಾಣದ ಶಕ್ತಿ ನಮ್ಮನ್ನ ಕಾಪಾಡ್ತಿರುತ್ತೆ ಅನ್ನೋ ನಂಬಿಕೆ ಮನಸ್ಸಿನ ನೆಮ್ಮದಿಗೆ ಬೇಕೇ ಬೇಕಾಗುತ್ತೆ. ನೀನು ತಪ್ಪು ಅಂತ ನಾನು ಹೇಳ್ತಿಲ್ಲ. ಆದರೆ ಸರಿಯೂ ಅಲ್ಲ ಅಂತಿದೀನಿ...’

‘ನಿನಗೆ ಸರಿ ಕಂಡ ದಾರೀಲಿ ನೀನು ನಡಿ. ಬೇಡ ಅಂದಿದೀನಾ ನಾನು?’

‘ನಿನಗೆ ಇಷ್ಟ ಇಲ್ಲದ್ದನ್ನು ಮಾಡೋಕೆ ಹಿತವಾಗಲ್ಲ ನಂಗೆ. ಒಮ್ಮತ ಅನ್ನೋದು ಇದ್ರೆ ಅದರ ಸುಖವೇ ಬೇರೆ, ಅದರಲ್ಲೂ ಸಂಸಾರದಲ್ಲಿ’ ಚಪಾತಿ ಮಾಡುತ್ತಿದ್ದಳು ಮನೋರಮಾ. ‘ಬಾ ಇಲ್ಲಿ. ನಾನು



ಲಟ್ಟಿಸಿ ಕೊಡ್ತೀನಿ, ನೀನು ಬೇಯಿಸು’ ಎನ್ನುತ್ತಾ ಮಗುಚುವ ಕೈಯನ್ನು ಅವನ ಕೈಗೆ ಹಿಡಿಸಿದಳು. ಚಪಾತಿ ಲಟ್ಟಿಸುತ್ತಲೇ ಮುಂದುವರಿಯಿತು ಅವಳ ಮಾತು. ‘ವರ್ತಮಾನದಲ್ಲೋ, ಭವಿಷ್ಯದ ಕುರಿತೋ ಸಹಿಸೋಕೆ ಅಸಾಧ್ಯ ಎನ್ನುವಂತಾ ಕಷ್ಟ ಎದುರಾದಾಗ, ಎದುರಾಗಬಹುದು ಅನ್ನೋ ಭೀತಿಯಿಂದ ಅದರ ನಿವಾರಣೆಗೆ, ಆ ಒತ್ತಡದಿಂದ ಹೊರ ಬರೋದಕ್ಕೆ ಇನ್ನ್ಯಾವುದೋ ಕಣ್ಣಿಗೆ ಕಾಣದ ಶಕ್ತಿ ಸಹಾಯ ಮಾಡುತ್ತೆ ಅನ್ನೋ ನಂಬಿಕೆ ಕೆಲವರ ಮಟ್ಟಿಗೆ ಅಥವಾ ಬಹುಜನರ ಮಟ್ಟಿಗೆ ಅತ್ಯಾವಶ್ಯಕ ಅಂತ ನಾನೂ ನಂಬ್ತೀನಿ. ಬಂದಿದ್ದನ್ನು ಎದುರಿಸಲೇಬೇಕು ಅನ್ನೋದು ಅನಿವಾರ್ಯ ಆದಾಗ ಕೈಕಾಲುಗೆಡದೆ ಅದನ್ನ ಹೇಗೆ ಎದುರಿಸಬೇಕು ಅನ್ನೋದರ ಬಗ್ಗೆ ತೀರ್ಮಾನ ತಗೊಳ್ಳೋದು ಗಟ್ಟಿ ಮನಸ್ಸಿದ್ದರೆ ಅಸಾಧ್ಯಾನೂ ಅಲ್ಲ. ವಾಸ್ತವವನ್ನ ಎದುರಿಸದೆ ವಿಧಿ ಇಲ್ಲ ಅಂತಾದಾಗ ಈ ಗಟ್ಟಿ ಮನಸ್ಸೇ ಬಲ ಕೊಡುತ್ತೆ.’

‘...’

‘ಸೈಕಾಲಜಿ ಇರಲಿ, ಜ್ಯೋತಿಷ್ಯ, ಪರಿಹಾರ ಇಂತಾದ್ದಿರಲಿ, ದುರ್ಬಲ ಮನಸ್ಸಿನೋರಿಗೆ ಭರವಸೆಯ ಬೆಳಕಾಗಿ ಕೆಲಸ ಮಾಡುತ್ತೆ ಅನ್ನೋದರಲ್ಲಿ ಅನುಮಾನ ಇಲ್ಲ ಕಣೋ. ಬಹಳ ಜನಕ್ಕೆ ಇದೂ ಅಗತ್ಯಾನೇ’

‘ನೀನು ಹಾಗೂ ಅಂತಿ, ಹೀಗೂ ಅಂತಿ...’

‘ಹೇಳಿದ್ನಲ್ಲೋ, ಅಂತಶ್ಶಕ್ತಿ ಪ್ರಬಲವಾಗಿದ್ದೋರು ವಾಸ್ತವವನ್ನ ಒಪ್ಪಿಕೋತಾರೆ, ಎದುರಿಸೋದು ಹೇಗೆ ಅಂತ ಅದಕ್ಕೆ ಸಿದ್ಧವಾಗ್ತಾರೆ. ಹೆಚ್ಚಿನವರು ಸುಖವಾಗಿದ್ದಾಗ ಧೈರ್ಯವಂತರು. ಕಷ್ಟ ಬಂದರೆ ಹೆದರುಪುಕ್ಕಲರು, ಅಂತೋರಿಗೆ ಯಾವುದೋ ಆಸರೆಯ ಆವಶ್ಯಕತೆ ಇರುತ್ತೆ. ನಿನ್ನ ಹಾಗೆ...’

‘ಏ, ನನ್ನನ್ಯಾಕೆ ಮಧ್ಯ ತರ್ತಿದ್ದಿ?’

‘ಮಾತಿಗೆ ಹೇಳ್ದೆ, ಅಷ್ಟೇ. ಅದಿಲ್ಲದಿದ್ರೆ ನಿನ್ನ ವಿಶ್ವನ ಹಾಗೆ ಕಂಗಾಲಾಗಿಬಿಡ್ತಾರೆ...’ ಎನ್ನುತ್ತಾ ಮನೋರಮಾ ಲಟ್ಟಿಸಿದ ಚಪಾತಿಯನ್ನು ಕಾವಲಿಯ ಮೇಲೆ ಹಾಕಿ ಮತ್ತೊಂದು ಉಂಡೆ ಕೈಗೆತ್ತಿಕೊಂಡಳು.

‘ಹಾಗಿದ್ರೆ ಅಂತಶ್ಶಕ್ತಿ ಪ್ರಬಲ ಆಗಿದ್ದೋರಿಗೆ ದೇವರು, ನಂಬಿಕೆ, ಆಚಾರ ವಿಚಾರ ಏನೂ ಬೇಡ್ವಾ?’ ಕೆಣಕಿದ ರಾಘವ.

‘ವಿತಂಡವಾದ ಮಾಡ್ತಿದ್ದಿ ನೀನು. ಕಷ್ಟಕಾಲದಲ್ಲಿ ದೇವರ ಮೇಲೆ ಭಾರ ಹಾಕಿ ಸಮಾಧಾನ ಕಂಡುಕೊಳ್ಳೋದರ ಬಗ್ಗೆ ಮಾತಾಡ್ತಿದ್ದಿದ್ದು ಅಲ್ವಾ? ನಿನ್ನ ಅಪ್ಪನ್ನೇ ತಗೋ, ದಿವಸಾ ಅವರು ಮಾಡೋ ದೇವರಪೂಜೆ ದೇವರಿಗೆ ಕೃತಜ್ಞತೆ ಸಲ್ಲಿಸೋ ಒಂದು ವಿಧಾನ. ಒಂದು ಸಂಪ್ರದಾಯ. ದಿನಚರಿಯ ಒಂದು ರೂಢಿ. ಒಂದು ನಂಬಿಕೆ ಕೂಡ. ಅದೆಲ್ಲಾ ಅವರವರ ಮನೋಧರ್ಮ. ಅವರವರ ವಿಚಾರಕ್ರಮಕ್ಕೆ ಸಂಬಂಧಪಟ್ಟಂತಾ ವಿಷಯ. ಅವರು ಹಾಗೆ, ನಾನು ಹೀಗೆ ಮತ್ತು ನೀನು’

ಮತ್ತದೇ ಕಗ್ಗದ ಸಾಲುಗಳು ನೆನಪಾದುವು ರಾಘವನಿಗೆ.

ಪ್ರತಿಕ್ರಿಯಿಸಿ: **feedback@sudha.co.in**